**ಅ.ದಾವಾ. 149/2022** **ಪಿ.ಡಬ್ಲ್ಯೂ- 1**

**ದಿನಾಂಕಃ 15/12/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ- ಶ್ರೀ ಹೆಚ್ ಪಿ ಎಸ್ ವಕೀಲರಿಂದ 1 ರಿಂದ 3 ಮತ್ತು 5ನೇ ಪ್ರತಿವಾದಿಯ ಪರವಾಗಿ.**

ಈ ದಾವೆಯನ್ನು ಏತಕ್ಕಾಗಿ ಹೂಡಿದ್ದೀರಿ ಎಂದರೆ ಸಾಕ್ಷಿಯು ನನಗೆ ಮೋಸ ಮಾಡಿದ್ದಾರೆ ಹಾಗೂ ಸಣ್ಣಸ್ವಾಮಿ, ಕೃಷ್ಣಪ್ಪ , ಸುಭದ್ರಮ್ಮ ಹಾಗೂ ವಸಂತಮ್ಮ ರವರುಗಳು ಅವರವರೇ ಜಮೀನುಗಳನ್ನು ಹಂಚಿಕೊಂಡಿರುತ್ತಾರೆ, ನನ್ನ ಪತಿಯ ಹೆಸರನ್ನು ಎಲ್ಲಿಯೂ ತೋರಿಸಿಕೊಂಡಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯನ್ನು ಯಾವ ಯಾವ ಸರ್ವೇ ನಂಬರ್ ಜಮೀನುಗಳಿಗೆ ಸಂಬಂಧಪಟ್ಟಂತೆ ಹೂಡಿದ್ದೀರಿ ಎಂದರೆ ಸಾಕ್ಷಿಯು ನನಗೆ ಸರ್ವೇ ನಂಬರ್ ಗೊತ್ತಿಲ್ಲ ಪಿಳ್ಳೇನಹಳ್ಳಿಯಲ್ಲಿ 3 ಕಡೆ ಇರುವ ಜಮೀನು ಹಾಗೂ

ಚಾಕೇನಹಳ್ಳಿ ಕಟ್ಟೆಯಲ್ಲಿ 2 ಕಡೆ ಇರುವ ಜಮೀನಿಗೆ ಈ ದಾವೆಯನ್ನು ಹೂಡಲಾಗಿದೆ ಎಂದು ನುಡಿಯುತ್ತಾರೆ.

ದಾವಾನುಸೂಚಿ ಸ್ವತ್ತುಗಳೆಲ್ಲವೂ ನನ್ನ ಮಾವನಾದ ಸಣ್ಣಪ್ಪ ಶೆಟ್ಟಿಯವರಿಗೆ ಸೇರಿದ ಸ್ವತ್ತುಗಳು. ಸದರಿ ಸಣ್ಣಪ್ಪ ಶೆಟ್ಟಿಯ ಅಣ್ಣ ತಮ್ಮಂದಿರು ಮೂರು ಜನ ಹಾಗೂ ಸಣ್ಣಪ್ಪ ಶೆಟ್ಟಿ ಗೆ ಒಬ್ಬ ತಂಗಿ ಇರುತ್ತಾರೆ. ಪ್ರಸ್ತುತ ಸಣ್ಣಪ್ಪ ಶೆಟ್ಟಿಯವರು ಬದುಕಿಲ್ಲ. ಅವರು ಮರಣ ಹೊಂದಿ ಸುಮಾರು 15 ವರ್ಷ ಆಗಿರಬಹುದು. ಸಣ್ಣಪ್ಪ ಶೆಟ್ಟಿಯವರ ಪತ್ನಿಯ ಹೆಸರು ಮರಿಯಮ್ಮ. ಸದರಿ ಮರಿಯಮ್ಮರವರು ಕೂಡ ಮರಣ ಹೊಂದಿರುತ್ತಾರೆ. ನನ್ನ ಮಾವ ಮರಣ ಹೊಂದಿ 5 ರಿಂದ 6 ವರ್ಷಗಳ ನಂತರ ಮರಿಯಮ್ಮರವರು ಮರಣ ಹೊಂದಿರುತ್ತಾರೆ.

ನನ್ನ ತವರೂರು ಗಂಡಸಿ. ನಾನು ದಾವೆಯನ್ನು ಸಲ್ಲಿಸುವಾಗ ನನ್ನ ಚಾಕೇನಹಳ್ಳಿಯ ವಿಳಾಸವನ್ನು ಕೊಟ್ಟಿರುತ್ತೇನೆ. ನಾನು ಚಾಕೇನಹಳ್ಳಿಯಲ್ಲಿ ಇದ್ದೆ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ. ವಿಜಯ್ ರವರು ನನ್ನ ಪತಿ ಎಂದು ತೋರಿಸಲು ನಮ್ಮ ಮದುವೆಯ ಫೋಟೋ ಹಾಗೂ ಸಿ.ಡಿ ಇರುತ್ತದೆ. ನಾನು ವಿಜಯ್ ರವರ ಪತ್ನಿ ಅಲ್ಲ ಎಂದರೆ ಸರಿಯಲ್ಲ. ವಿಜಯ್ ರವರು ಪ್ರಸ್ತುತ ಬದುಕಿಲ್ಲ ಎಂದರೆ ಸರಿ . ವಿಜಯ್ ರವರು ಬದುಕಿರಬೇಕಾದರೆ ಯಾರನ್ನು ಕೂಡ ಮದುವೆಯಾಗಿಲ್ಲ ಎಂದರೆ ಸರಿ . ವಿಜಯ್ ರವರಿಗೆ ಪ್ರತಿವಾದಿಯರನ್ನು ಹೊರತು ಪಡಿಸಿ ಬೇರೆ ಯಾರು ಕೂಡ ವಾರಸ್ಸುದಾರರು ಇರಲಿಲ್ಲ ಎಂದರೆ ಸಾಕ್ಷಿಯು ವಿಜಯ್ ರವರು ಮರಣ ಹೊಂದಿದ ವಿಚಾರ ನನಗೆ ಗೊತ್ತಿರಲಿಲ್ಲ ನನಗೆ ಯಾರು ಕೂಡ ಸದರಿ ವಿಚಾರವನ್ನು ತಿಳಿಸಿಲ್ಲ, 2 ರಿಂದ 3 ತಿಂಗಳ ನಂತರ ಸದರಿ ವಿಚಾರ ತಿಳಿದು ನಾನು ಸರ್ಕಾರಿ ಆಸ್ಪತ್ರೆಗೆ ಅರ್ಜಿ ಸಲ್ಲಿಸಿ ಮರಣ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ವಿಜಯ್ ರವರ ಜೊತೆ ನೀವು ಯಾವತ್ತೂ ಕೂಡ ವಾಸವಿರಲಿಲ್ಲ ಎಂದರೆ ಸಾಕ್ಷಿಯು ನಾನು ನನ್ನ ಮಗು ಹುಟ್ಟಿ ಸುಮಾರು 3 ವರ್ಷದ ವರೆಗೂ ಅವರ ಜೊತೆಯೇ ವಾಸವಾಗಿದ್ದೆ ಎಂದು ನುಡಿಯುತ್ತಾರೆ.

ವಿಜಯ್ ರವರಿಂದ ನನಗೆ ಯಾವುದೇ ಮಕ್ಕಳು ಆಗಿಲ್ಲ ಎಂದರೆ ಸರಿಯಲ್ಲ. ನಿಮಗೆ ವಿಜಯ್ ರವರಿಂದ ಮಕ್ಕಳು ಹುಟ್ಟಿರುತ್ತದೆ ಎನ್ನುವ ಸಂಬಂಧವಾಗಿ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ವಿಜಯ್ ರವರ ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಮರಣ ಪ್ರಮಾಣಪ ತ್ರವನ್ನು ನಾನು ಹಾಸನದ ಸರ್ಕಾರಿ ಆಸ್ಪತ್ರೆಯಲ್ಲಿ ಪಡೆದುಕೊಂಡಿರುತ್ತೇನೆ. ಆ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲೆಂದು ನನ್ನ

ವಕೀಲರಿಗೆ ಕೊಟ್ಟಿರುತ್ತೇನೆ. ನಾನು ಯಾವುದೇ ಮರಣ ಪ್ರಮಾಣಪತ್ರವನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಆ ಮರಣ ಪ್ರಮಾಣಪತ್ರದಲ್ಲಿ ಪತ್ನಿಯ ಹೆಸರು ಭಾಗ್ಯ ಎಂದು ಬರೆಯಲಾಗಿದೆ. ಆ ಪ್ರಮಾಣಪತ್ರವನ್ನು ನಾನು ಪಡೆದುಕೊಳ್ಳಬೇಕಾದರೆ ನನ್ನ ಹೆಸರನ್ನು ನಾನು ಹೇಳಿ ಬರೆಯಿಸಿರುವುದು ಎಂದರೆ ಸರಿ . ವಿಜಯ್ ರವರು ಮರಣ ಹೊಂದಿರುವ ವಿಚಾರ ಅವರು ಮರಣ ಹೊಂದಿ ಸುಮಾರು 3 ತಿಂಗಳ ನಂತರ ನನಗೆ ತಿಳಿಯಿತು. ಅವರು 2020 ರಲ್ಲಿ ಮರಣ ಹೊಂದಿರುತ್ತಾರೆ. ನಾನು ವಿಜಯ್ ರವರ ಜೊತೆ ಚಾಕೇನಹಳ್ಳಿಯಲ್ಲಿ 3 ವರ್ಷ ವಾಸವಿದ್ದೆನು. ಚಾಕೇನಹಳ್ಳಿಯಲ್ಲಿ ವಾಸವಿದ್ದೆ ಎನ್ನುವ ಸಮಯದಲ್ಲಿ ಪಡಿತರ ಚೀಟಿಯನ್ನು ಮಾಡಿಸಿಕೊಂಡು ರೇಷನ್ ಅನ್ನು ಪಡೆದುಕೊಳ್ಳುತ್ತಿರಲಿಲ್ಲ. ಸಾಮಾನ್ಯವಾಗಿ ಪಡಿತರ ಚೀಟಿಯಲ್ಲಿ ಪತ್ನಿ ಮಕ್ಕಳ ಹೆಸರುಗಳನ್ನು ನಮೂದು ಮಾಡಿರುತ್ತಾರೆ ಎಂದರೆ ಸರಿ . ವಿಜಯ್ ರವರು ಬದುಕಿದ್ದಾಗ ಅವರ ಪಡಿತರ ಚೀಟಿಯಲ್ಲಿ ಅವರು ಪತ್ನಿ ಮಕ್ಕಳ ಹೆಸರುಗಳು ಇರಲಿಲ್ಲ ಎಂದರೆ ಸರಿ . ವಿಜಯ್ ರವರಿಗೆ ಯಾವುದೇ ಪತ್ನಿ ಮಕ್ಕಳು ಇಲ್ಲದೇ ಇದ್ದುದ್ದರಿಂದ ಅದು ನಮೂದು ಆಗಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಪಡಿತರಚೀಟಿಯನ್ನು ತೋರಿಸಿ ಅದರಲ್ಲಿ ಇರುವ ಛಾಯಾಚಿತ್ರ ವಿಜಯ್ ರವರದ್ದೇ ? ಎಂದು ಕೇಳಲಾಗಿ ಸಾಕ್ಷಿಯು ಸದರಿ ಪಡಿತರ ಚೀಟಿಯನ್ನು ನೋಡಿ ಹೌದು ಎಂದು ನುಡಿಯುತ್ತಾರೆ. ಸದರಿ ಛಾಯಾಚಿತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಹಾಗೂ ಸದರಿ ಪಡಿತರ ಚೀಟಿಯನ್ನು ನಿಶಾನೆಗೊಳಿಸಬೇಕೆಂದು ಕೇಳಿದ ಮೇರೆಗೆ ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ವಿಜಯ್ ರವರ ಶವ ಸಂಸ್ಕಾರದಲ್ಲಿ ನಾನು ಭಾಗಿಯಾಗಿರಲಿಲ್ಲ ಎಂದರೆ ಸರಿ . ನನಗೆ ತಿಳಿಸಿರಲಿಲ್ಲ ಎಂದು ನುಡಿಯುತ್ತಾರೆ. ನನಗೆ ಚಾಕೇನಹಳ್ಳಿಯಲ್ಲಿ ಹಲವಾರು ಜನ ಪರಿಚಯ ಇದ್ದಾರೆ ಎಂದರೆ ಸರಿ .

ವಿಜಯ್ ರವರು ಮರಣ ಹೊಂದಿರುತ್ತಾರೆ ಎನ್ನುವ ವಿಚಾರ ನನಗೆ ನನ್ನ ಸಂಬಂಧಿಕರಿಂದ ತಿಳಿದು ಬಂದಿರುತ್ತದೆ. ನನಗೆ ವಿಚಾರವನ್ನು ತಿಳಿಸಿರುತ್ತಾರೆ ಎನ್ನುವ ಸಂಬಂಧಿಕರು ವಿಜಯ್ ರವರ ಶವ ಸಂಸ್ಕಾರಕ್ಕೆ ಹೋಗಿದ್ದರು ಎಂದರೆ ಸರಿ . ಒಂದು ವೇಳೆ ನೀವು ವಿಜಯ್ ರವರ ಪತ್ನಿಯೇ ಆಗಿದ್ದರೆ ಅವರ ಸಂಬಂಧಕರು ನಿಮಗೆ ತಿಳಿಸಿರುತ್ತಿದ್ದರು ನಿಮಗೂ ವಿಜಯ್ ರವರಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದುದರಿಂದ ವಿಜಯ್ ರವರ ಶವ ಸಂಸ್ಕಾರಕ್ಕೆ ನಿಮಗೆ ತಿಳಿಸಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿಯುತ್ತಾರೆ.

**<u>(ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಪಾಟೀ ಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು).</u>**

**ಮರು ವಿಚಾರಣೆಃ- ಇಲ್ಲ.**

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸ.ಇ.

ಜೆ.ಎಂ.ಎಫ್.ಸಿ., ಹೊಳೆನರಸೀಪುರ.